Pratham Mysore

Every Child in School and Learning Well

ಮಾಡಿರಿ-ನೋಡಿರಿ-ಕಲಿಯಿರಿ

# ಪ್ರಜ್ಞಾನ ಪತ್ರಿಕೆ

**22-10-2022** *ಪ್ರಥಮ್ ಮೈಸೂರ್ ಪ್ರೇರಿತ* *ಸಂಚಿಕೆ- 08*

## ಇರುವೆ! ಇರುವೆ!! ನೀ ಎಲ್ಲೆಲ್ಲೂ ಇರುವೆ!!!

ಇದು ಒಂದು ಮೋಜಿನ ಆಟವಾಗಿದೆ.ಇರುವೆಗಳು ಯಾವ ರೀತಿ ಓಡಾಡುತ್ತವೆ ಎಂದು ನಿಮಗೆ ತಿಳಿದಿದೆಯೇ? ಈ ಚಟುವಟಿಕೆ ಯಲ್ಲಿ ಇರುವೆಗಳು ಓಡಾಡುವ ರೀತಿಯನ್ನು ನೋಡೋಣ





**ವಿಧಾನ:**

**1**. ಚಲಿಸುತ್ತಿರುವ ಒಂದು ಇರುವೆಯನ್ನು ಆರಿಸಿಕೊಳ್ಳಿ.

**2**.ಒಂದು ನಿಮಿಷದವರಗೆ ಚಲಿಸುವುದನ್ನು ಗಮನಿಸಬೇಕು.ಅದು ಎಲ್ಲಿಂದ ಚಲಿಸಲು ಪ್ರಾರಂಭಿಸಿದೆ ಎಂದು ಗುರುತು ಹಾಕಿ.ಅದು ಮಧ್ಯದಲ್ಲಿ ಏನಾದರು ನಿಂತರೆ ಅದಕ್ಕೆ ಯಾವುದೇ ರೀತಿಯ ತೊಂದರೆ ಕೊಡಬೇಡಿ.ಒಂದು ನಿಮಿಷ ಆಗುವವರೆಗೂ ಕಾಯಬೇಕು.

**3**.ಒಂದು ನಿಮಿಷದ ನಂತರ ಅದು ಇರುವಲ್ಲಿ ಗುರುತು ಹಾಕಿ.





**4**.ಈ ಎರಡು ಗುರುತುಗಳ ನಡುವಿನ ಅಂತರವೇ ಇರುವೆ ಒಂದು ನಿಮಿಷದಲ್ಲಿ ಕ್ರಮಿಸಿದ ದೂರ.

**5**. ಇರುವೆ ಚಲಿಸದೆ ಹಾಗೆ ಬಹಳ ಸಮಯ ನಿಂತಿತೆಂದರೆ .ಪ್ರಯೋಗವನ್ನು ಮತ್ತೊಮ್ಮೆ ಮಾಡಿ.

**6**.ಇರುವೆ ಒಂದು ನಿಮಿಷದಲ್ಲಿ ಕ್ರಮಿಸಿದ ದೂರದ ಆಧಾರದ ಮೇಲೆ ಒಂದು ಗಂಟೆ ಅವಧಿಯಲ್ಲಿ ಎಷ್ಟು ದೂರ ಕ್ರಮಿಸುತ್ತದೆ?

**ವಿ.ಸೂ**: ನೆಲದ ಮೇಲೆ ಗೋಡೆ ಅಂಚಿನಲ್ಲಿ ಚಲಿಸುತ್ತಿರುವ ಇರುವೆಯನ್ನು ಗಮನಿಸಿ.ಆಗ ನೇರ ಚಲನೆಯ ದೂರವನ್ನು ಸುಲಭವಾಗಿ ಅಳೆಯಬಹುದು.

## ನಿಮಗೆ ತಿಳಿದಿದೆಯೇ?

# ಇರುವೆಗಳಲ್ಲಿ 12000 ಕ್ಕೂ ಹೆಚ್ಚು ವಿಧಗಳಿವೆ.

# ಅಂಟಾರ್ಕ್ಟಿಕ ಖಂಡವನ್ನು ಹೊರತುಪಡಿಸಿ ಮಿಕ್ಕೆಲ್ಲ ಭೂ ಪ್ರದೇಶಗಳಲ್ಲಿ ಇರುವೆಗಳು ಕಂಡುಬರುತ್ತವೆ.

#ಇರುವೆಗಳು ಸಂಘ ಜೀವಿಗಳು.ಒಂದು ಗೂಡಿನಲ್ಲಿ ನೂರಾರಿಂದ ಲಕ್ಷಗಟ್ಟಲೆ ಇರುವೆಗಳು ಕಂಡುಬರಬಹುದು.

#ಒಂದು ಗೂಡಿನಲ್ಲಿ ಸಾಮಾನ್ಯವಾಗಿ ಒಂದು ರಾಣಿ ಇರುವೆ ಇರುತ್ತದೆ. ಮೊಟ್ಟೆ ಇಡುವುದು ಮಾತ್ರ ಇದರ ಕೆಲಸ.ಹೆಣ್ಣು ಕೆಲಸಗಾರ ಇರುವೆಗಳು. ಗೂಡಿನ ಸ್ವಚ್ಛತೆ ಮತ್ತು ಮರಿಗಳಿಗೆ ಆಹಾರ ಒದಗಿಸುವುದು ಇವುಗಳ ಕೆಲಸ.

#ಇರುವೆಗಳು ತಮ್ಮ ದೇಹದ ತೂಕಕ್ಕಿಂತ 15-50 ಪಟ್ಟು ಭಾರವನ್ನು ಹೊರಬಲ್ಲವು.

## ನಮ್ಮ ಹೆಮ್ಮೆಯ ಡಾ.ಎಪಿಜೆ ಅಬ್ದುಲ್ ಕಲಾಮ್

“ಯಶಸ್ಸು ಸಾಧಿಸುವ ನನ್ನ ಸಂಕಲ್ಪ ಸಾಕಷ್ಟು ಬಲವಾಗಿದ್ದರೆ ಸೋಲು ಎಂದಿಗೂ ನನ್ನನ್ನು ಹಿಂದಿಕ್ಕುವುದಿಲ್ಲ” ಎಂಬ ಕಲಾಮ್ ರವರ ಈ ಘೋಷಣೆ ಎಲ್ಲರಿಗೂ ಸ್ಫೂರ್ತಿದಾಯಕ. ನಮ್ಮ ದೇಶದ 11 ನೆ ರಾಷ್ಟ್ರಪತಿಗಳಾದ ಕಲಾಂರವರು ದೇಶ ಕಂಡ ಅತ್ಯುತ್ತಮ ವಿಜ್ಞಾನಿ ಕಲಾಂರವರ ಜನನ 15-10-1931 ರಲ್ಲಿ ಆಯಿತು. ವಿದ್ಯಾರ್ಥಿಗಳೆಂದರೆ ಅಚ್ಚುಮೆಚ್ಚು.ಇವರ ಹುಟ್ಟಿದ ದಿನವನ್ನು ಜಾಗತಿಕ ವಿದ್ಯಾರ್ಥಿಗಳ ದಿನವೆಂದು ಆಚರಿಸಲಾಗುತ್ತದೆ



**ಪ್ರಥಮ್ ಚಟುವಟಿಕೆ ಮತ್ತು ಸಂಪನ್ಮೂಲ ಕೇಂದ್ರ**

ಹಿರಿಯ ಪ್ರಾಥಮಿಕ ಮಟ್ಟದಲ್ಲಿ ವಿಜ್ಞಾನ ಕಲಿಯಲು,ಕಲಿಸಲು ನಮ್ಮ ಕೇಂದ್ರವು ಉತ್ತಮ ಕೇಂದ್ರವಾಗಿದೆ.ಸದಸ್ಯತ್ವ ಉಚಿತ.

ಸ್ವಯಂ ಸೇವಕರಾಗಲು ಅವಕಾಶವಿದೆ.

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: +919110477512**